RAJAJI INSTITUTE OF BUSINESS STUDIES
LIBRARY
BANGALORE-54

**SE – 296**

ಎರಡನೇ ಸೆಮಿಸ್ಟರ್ ಬಿ.ಬಿ.ಎ. ಪದವಿ ಪರೀಕ್ಷೆ, ಜೂನ್/ಜುಲೈ 2026
(ಎಸ್.ಇ.ಪಿ. 2025 – 26) (Freshers)
ಕನ್ನಡ ಭಾಷಾ ಪತ್ಯ – ೨
ವ್ಯವಹಾರ ಆಡಳಿತ ಕನ್ನಡ

ಸಮಯ : 3 ಗಂಟೆಗಳು ಗರಿಷ್ಠಾಂಕಗಳು : 80

I. ಆರು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (**40** ಪದಗಳಿಗೆ ಮೀರದಂತೆ). **(6×2=12)**

1) 'ತರುಣಿಯ ಹಾಡು' ಕವಿತೆಯಲ್ಲಿ ಪ್ರೇಮ ಮತ್ತು ವಂಚನೆಯ ಸಂಬಂಧ ಹೇಗೆ ವ್ಯಕ್ತವಾಗಿದೆ ?
2) ಇಂದಿನ ಕಾಮಗಾರಿಗಳಲ್ಲಿ ಯಾವ-ಯಾವ ತ್ಯಾಜ್ಯ ವಸ್ತುಗಳು ಜಲಮೂಲಕ್ಕೆ ಸೇರುತ್ತಿವೆ ?
3) ಚಿಲ್ಲರೆ ದೇವರುಗಳ ಸಮ್ಮೇಳನ ಕಥೆಯ ಮುಖ್ಯ ಸಂದೇಶವೇನು ?
4) ''ಹಿಂದೆ ಎಂದೋ ಒಮ್ಮೆ ಹೋರಾಡಿದನು'' ಎಂಬ ಸಾಲು ಏನನ್ನು ಸೂಚಿಸುತ್ತದೆ ?
5) ದಡಾಬ್ ಶಿಬಿರವನ್ನು ಯಾವ ಉದ್ದೇಶದಿಂದ ಆರಂಭಿಸಲಾಯಿತು ?
6) ಲಲಿತೆಯ ಕಾಲದಲ್ಲಿ ಮನೆಗೆ ಬಂದ ಪ್ರಮುಖ ತಾಂತ್ರಿಕ ಸಾಧನ ಯಾವುದು ?
7) ಭೂಕುಸಿತಗಳು ಯಾವ-ಯಾವ ಪ್ರದೇಶಗಳಲ್ಲಿ ಉಂಟಾಗಿದೆ ?
8) ಚೂಡಾಮಣಿ ಮಾಡಿದ ಸಾಧನೆ ಯಾವುದು ? ಅದರ ವ್ಯತಿರಿಕ್ತ ಪರಿಣಾಮವೇನು ?

II. ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (**80** ಪದಗಳಿಗೆ ಮೀರದಂತೆ). **(4×5=20)**

1) ವಾಗೀಶಿ ಮತ್ತು ಆರ್ಮುಗಂ ಕುಟುಂಬದ ವಿವರಗಳನ್ನು ಬರೆಯಿರಿ.
2) ರಾಜಕುಮಾರ ಮೈನಾವತಿಯನ್ನು ಭೇಟಿ ಮಾಡಲು ಮಾಡಿದ ಪ್ರಯತ್ನಗಳಾವುವು ?
3) 'ಪಾರಿಜಾತೆಯ ಚೈತ್ರ ಲಹರಿ' ಕವನದಲ್ಲಿ ಮೂಡಿ ಬಂದಿರುವ ಪ್ರಕೃತಿ ಮತ್ತು ಸಾಮಾಜಿಕ ಆಶಯಗಳನ್ನು ನಿರೂಪಿಸಿ.
4) 'ಕಾಡಿನಲ್ಲಿ ಒಂದಿರುಳು' ಪತ್ಯದಲ್ಲಿ ನಿರೂಪಿತವಾಗಿರುವ ಚಂದ್ರೋದಯದ ವರ್ಣನೆಯನ್ನು ಕುರಿತು ಬರೆಯಿರಿ.
5) ಯುವ ಕೈದಿಗಳ ಮೇಲೆ ನಡೆದ ದೌರ್ಜನ್ಯವನ್ನು ಕವಯತ್ರಿ ಹೇಗೆ ನಿರೂಪಿಸಿದ್ದಾರೆ ?
6) ಚಂದಗೋಪನ ಪಾತ್ರದ ಮೂಲಕ ಲೇಖಕಿ ಯಾವ ಸಮಾಜ ಸತ್ಯವನ್ನು ಬಿಂಬಿಸಿದ್ದಾರೆ ?

III. ಮೂರು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (**160** ಪದಗಳಿಗೆ ಮೀರದಂತೆ). **(3×10=30)**

1) ರಾಬೆನ್ ದ್ವೀಪ : ಪ್ರತಿಮೆ ಕವಿತೆಯಲ್ಲಿ ಹಿಂಸೆ, ದಮನ ಮತ್ತು ಮಾನವೀಯತೆಯ ನಡುವಿನ ಸಂಘರ್ಷವನ್ನು ವಿಶ್ಲೇಷಿಸಿ.
2) ಪಶ್ಚಿಮ ಘಟ್ಟದ ಜೀವವೈವಿಧ್ಯತೆಯ ಮೇಲೆ ಮಾನವ ಹಸ್ತಕ್ಷೇಪದ ಪರಿಣಾಮಗಳನ್ನು ವಿವರಿಸಿ.

P.T.O.

Scanned with OKEN Scanner

LIBRARY
BANGALORE-54

3) 'ಕುರಿ ಕಾಯೋ ಹುಡುಗಿ' ಪಠ್ಯ ಭಾಗದಲ್ಲಿ ಲೇಖಕಿಯ ಜೀವನವನ್ನು ರೂಪಿಸುವಲ್ಲಿ ಅಜ್ಜಿ ಹಾಲಿಮಾ ಮತ್ತು ತಾಯಿಯ ಪಾತ್ರವನ್ನು ವಿಶ್ಲೇಷಿಸಿ.

4) ಸಮಾಜದ ಸಮಸ್ಯೆಗಳಿಗೆ ಹೊಂದಾಣಿಕೆ ಹೇಗೆ ಪರಿಹಾರವಾಗುತ್ತದೆ ಎಂಬುದನ್ನು ಪಠ್ಯದ ಹಿನ್ನೆಲೆಯಲ್ಲಿ ವಿಶ್ಲೇಷಿಸಿ.

5) ಮೈನಾವತಿ ಜನಪದ ಕಥೆಯ ಸಾಮಾಜಿಕ, ಸಾಂಸ್ಕೃತಿಕ ಸಂದೇಶವನ್ನು ವಿಶ್ಲೇಷಿಸಿ.

IV. ರಾಜ್ಯ ಪೋಲೀಸ್ ಇಲಾಖೆ ಅನುಷ್ಠಾನ ಮಾಡಿರುವ 'ರಾಣಿ ಚೆನ್ನಮ್ಮ / ಒನಕೆ ಓಬವ್ವ ಪಡೆ' ಯೋಜನೆಯಡಿ ಕೈಗೊಂಡಿರುವ ಮಹಿಳಾ ಮತ್ತು ಮಕ್ಕಳ ಸುರಕ್ಷತಾ ಕ್ರಮಗಳ ಮಾಹಿತಿ ಕೋರಿ ಮಾಹಿತಿ ಹಕ್ಕಿನಡಿ, ಆಯುಕ್ತರು, ರಾಜ್ಯ ಪೋಲೀಸ್ ಇಲಾಖೆ, ಬೆಂಗಳೂರು ಇವರಿಗೆ ಪತ್ರವನ್ನು ಬರೆಯಿರಿ. **(1×5=5)**

V. ನಿಮ್ಮ ಕಾಲೇಜಿನಲ್ಲಿ ನಡೆದ 2025-26 ನೇ ಶೈಕ್ಷಣಿಕ ಸಾಲಿನ ಸಾಹಿತ್ಯ–ಸಾಂಸ್ಕೃತಿಕ–ಕ್ರೀಡಾ ಚಟುವಟಿಕೆಗಳ ವರದಿಯನ್ನು ಬರೆಯಿರಿ. **(1×5=5)**

VI. ಈ ಕೆಳಗೆ ಕೊಟ್ಟಿರುವ ಕಂಡಿಕೆಯನ್ನು ಮೂರನೇ **ಒಂದು** ಭಾಗಕ್ಕೆ ಸಂಕ್ಷೇಪಿಸಿ ಸೂಕ್ತ ಶೀರ್ಷಿಕೆ ನೀಡಿ. **(1×4=4)**

ಇಂದಿನ ಜನಾಂಗಕ್ಕೆ ಜ್ಞಾನ ಎನ್ನುವುದು ಸರ್ವ ಗ್ರಾಹ್ಯ, ಸುಲಭ ಗ್ರಾಹ್ಯ, ಆದರಿಲ್ಲಿ ಯೋಚಿಸಬೇಕಾದ ಸಂಗತಿಗಳಿವೆ. ಪ್ರಪಂಚದ ಮೂಲೆ–ಮೂಲೆಯಲ್ಲಿಯೂ ತಮ್ಮ ಕೈ ಮುಷ್ಟಿಯಲ್ಲಿದೆ ಎನ್ನುವಂತೆ ಲಭಿಸುತ್ತಿದೆ ನಿಜ. ಇಷ್ಟಾಗಿ ಪುಸ್ತಕಗಳು ಇಲ್ಲವಾಗಿಲ್ಲ. ಅಂತರ್ಜಾಲದಲ್ಲಿ ಲಭ್ಯವಿದೆ. ಹೊರತಾಗಿ ಹೊರಗಡೆಯಲ್ಲೂ ಇವೆ. ಆದರೆ ಬೆಳೆಗಿಂತ ಕಳೆಯೇ ಹೆಚ್ಚಾಗಿ ಮಕ್ಕಳ ಆಯ್ಕೆಯಾಗುತ್ತಿರುವ ದುರಂತವನ್ನು ಕಾಣಬೇಕಾಗಿದೆ. ಅಗಾಧವಾಗಿ ದೊರೆಯುತ್ತಿರುವ ಈ ಜ್ಞಾನದ ರಾಶಿಯಲ್ಲಿ ಏನು ತೆಗೆದುಕೊಳ್ಳಲಿ ? ಎಲ್ಲಿಂದ ಏನು ಕಲಿಯಲಿ ? ಎನ್ನುವುದು ಸರಿಯಾಗಿ ಗೊತ್ತಾಗದೆ ತಪ್ಪು ಆಯ್ಕೆ ಹೆಚ್ಚಾಗುತ್ತಿದೆ. ಜ್ಞಾನದ ಜೊತೆಗೆ ಬೇಡದ ಅನಾವಶ್ಯಕ ವಿಷಯಗಳೂ ತಿಳಿಯುತ್ತಾ ಹೋಗಿ ದಾರಿತಪ್ಪಿಸುತ್ತವೆ. ಯಾವುದು ಕೆಟ್ಟದು ? ಯಾವುದು ಒಳ್ಳೆಯದು ? ಎಂಬ ಪರಿಜ್ಞಾನವೇ ಇಲ್ಲವಾಗುತ್ತದೆ. ಒಟ್ಟಿನಲ್ಲಿ ಇಂದಿನ ಜ್ಞಾನಾರ್ಜನೆಯಲ್ಲಿ ಬುದ್ಧಿಗೆ ಮಿಗಿಲು ಪ್ರಾಶಸ್ತ್ಯ ಭಾವನೆಗೆ ಇಲ್ಲ. ಬುದ್ಧಿವಂತಿಕೆ IQ ಎನ್ನುವುದು ಮಹತ್ತಾಗಿ ಬೆಳೆಯುತ್ತಿದೆ ಆದರೆ ಇದರ ಪರಿಣಾಮದ ಸಲುವಾಗಿ ಭಾವನಾತ್ಮಕವಾಗಿ ಸೆಲೆ ಬತ್ತುತ್ತಿದೆ. EQ ಬಹಳಷ್ಟು ಇದಕ್ಕೆ ಬಲಿಕೊಟ್ಟು ಶುಷ್ಕವಾಗುತ್ತಿದ್ದಾರೆ. ಹೀಗಾಗಿಯೇ ಕೌಟುಂಬಿಕ, ಸಾಮಾಜಿಕ ಸಮಸ್ಯೆಗಳು ಹೆಚ್ಚುತ್ತಿವೆ. Intellectual growth ವಿಜೃಂಭಿಸಿ Institutional growth ಎನ್ನುವುದು ಸೊರಗುತ್ತಿದೆ ಸಂವೇದನೆಗಳು ಸಾಯತೊಡಗಿವೆ.

VII. ನಿಮಗೆ ಗೊತ್ತಿರುವ **ನಾಲ್ಕು** ಗಾದೆಗಳನ್ನು ಬರೆಯಿರಿ. **(1×4=4)**

---

Scanned with OKEN Scanner